ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	76
ಮಾನ್ಯ ಸದಸ್ಯರ ಹೆಸರು	:	ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸಬೇಕಾದ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ಕೋವಿಡ್-19 ನಿರ್ವಹಣೆಗೆ ಕೋಲಾರ ಜಿಲ್ಲೆಗೆ ಮಾರ್ಚ್-2020 ರಿಂದ ಇದುವರೆವಿಗೂ ಬಿಡುಗಡೆಯಾಗಿರುವ ಮೊತ್ತವೆಷ್ಟು; ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ದಾನಿಗಳು ನೀಡಿರುವ ಮೊತ್ತದ ಸಂಪೂರ್ಣ ಮಾಹಿತಿ ನೀಡುವುದು;	ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕೋವಿಡ್-19 ನಿರ್ವಹಣೆಗೆ ಕೋಲಾರ ಜಿಲ್ಲೆಗೆ ಮಾರ್ಚ್-2020 ರಿಂದ ಇದುವರೆಗೆ ಮುಕ್ತ ನಿಧಿ ಅಡಿಯಲ್ಲಿ ರೂ.70.00 ಲಕ್ಷ ಹಾಗೂ ಆಶಾ ಪ್ರೋತ್ಸಾಹಧನ ಅಡಿಯಲ್ಲಿ ರೂ.68.92 ಲಕ್ಷ ಒಟ್ಟಾರೆ ರೂ.138.92 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ದಾನಿಗಳಿಂದ ಯಾವುದೇ ಅನುದಾನ ಸ್ವೀಕೃತವಾಗಿರುವುದಿಲ್ಲ.
ಆ)	ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ದಾನಿಗಳು ನೀಡಿರುವ ಒಟ್ಟು ಮೊತ್ತದಲ್ಲಿ ಇದುವರೆವಿಗೂ ವೆಚ್ಚವಾಗಿರುವ ಮೊತ್ತವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು);	ಕೋವಿಡ್-19 ಸೋಂಕಿತರಿಗೆ ಅನುಗುಣವಾಗಿ ಅನುದಾನವನ್ನು ವಿಧಾನ ಸಭಾ ಕ್ಷೇತ್ರಗಳ ಆಸ್ಪತ್ರೆಗಳಿಗೆ ಹಂಚಿಕೆ ಮಾಡಲಾಗಿದೆ.
ಇ)	ಈ ಮೊತ್ತವನ್ನು ಖರ್ಚು ಮಾಡುವ ಅಧಿಕಾರವನ್ನು ಯಾವ ಯಾವ ಇಲಾಖೆಯ ಅಧಿಕಾರಿಗಳಿಗೆ ನೀಡಲಾಗಿದೆ;	ಈ ಮೊತ್ತವನ್ನು ಖರ್ಚು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳ ಆದೇಶದಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಇವರಿಗೆ ಅಧಿಕಾರ ನೀಡಲಾಗಿದೆ
ಈ)	ಒಬ್ಬ ಕೋವಿಡ್-19 ರೋಗಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ದಾನಿಗಳು ನೀಡುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು);	ಪ್ರತಿ ಕೋವಿಡ್-19 ಸೋಂಕಿತರಿಗೆ ಆಹಾರದ ವೆಚ್ಚಕ್ಕಾಗಿ ಪ್ರತಿ ದಿನಕ್ಕೆ ರೂ.250/-ಗಳನ್ನು ಆರೋಗ್ಯ ರಕ್ಷಾ ಸಮಿತಿ (A.R.S) ನಿಧಿ ಅಥವಾ ಜಿಲ್ಲಾಧಿಕಾರಿಗಳಿಂದ ಭರಿಸಲಾಗುತ್ತಿದೆ.
ಉ	ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ದಾನಿಗಳು ನೀಡಿರುವ ಒಟ್ಟು ಮೊತ್ತದಲ್ಲಿ ಇದುವರೆವಿಗೂ ವೆಚ್ಚವಾಗಿರುವ ಮೊತ್ತವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು);	ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕೋವಿಡ್-19 ನಿರ್ವಹಣೆಗೆ ಕೋಲಾರ ಜಿಲ್ಲೆಗೆ ಮಾರ್ಚ್-2020 ರಿಂದ ಇದುವರೆವಿಗೂ ಬಿಡುಗಡೆಯಾಗಿರುವ ಅನುದಾನದಲ್ಲಿ ಆಗಸ್ಟ್-2020ರ ಅಂತ್ಯದವರೆಗೆ ಮುಕ್ತ ನಿಧಿ ಅಡಿಯಲ್ಲಿ ರೂ.11.29 ಲಕ್ಷ ಹಾಗೂ ಆಶಾ ಪ್ರೋತ್ಸಾಹಧನ ಅಡಿಯಲ್ಲಿ ರೂ.39.54 ಲಕ್ಷ ಒಟ್ಟಾರೆ ರೂ.50.83 ಲಕ್ಷ ವೆಚ್ಚವಾಗಿರುತ್ತದೆ.

ಸಂಖ್ಯೆ: ಆಕುಕ 39 ಎಸ್.ಟಿ.ಕ್ಯೂ 2020

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು